ಕರ್ನಾಟಕ ಸರ್ಕಾರ (ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,
ಹಾಸನ

ಸ್ಪೆಷಲ್ ಕೇಸ್.ನಂಃ **92/2011**

ಚಾಸಾ-11 ಫ್ರಾಸಾ -8 ದಿನಾಂಕ 17.10.2019
ಪ್ರಮಾಣವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಕಲ್ಪಲತಾ ರಾಜನ್ |
| ತಂದೆಯ ಹೆಸರು | : | ಗೋಪಾಲ್ |
| ವಯಸ್ಸು | : | **52** ವರ್ಷ |
| ಉದ್ಯೋಗ | : | ಉಪಆಯುಕ್ತರು, ಕೇಂದ್ರ ಆದಾಯ ತೆರಿಗೆ ಇಲಾಖೆ, ಮೈಸೂರು |
| ವಾಸ | : | ಮೈಸೂರು |

**ಮುಖ್ಯ ವಿಚಾರಣೆಃ ಸರ್ಕಾರದ ಪರ ಸ್ಪೆಷಲ್ ಪಿಪಿ ರವರಿಂದಃ**

ನಾನು 2009 ರಿಂದ 2011 ರವರೆಗೆ ಹಾಸನದ ಆದಾಯ ತೆರಿಗೆ ಕಚೇರಿಯಲ್ಲಿ ಆದಾಯ ತೆರಿಗೆ ಅಧಿಕಾರಿಯಾಗಿ(ವಾರ್ಡ್-2) ಕೆಲಸ ಮಾಡಿದ್ದೇನೆ.

**2.** ಹಾಸನದ ಲೋಕಾಯುಕ್ತ ಕಚೇರಿಯಿಂದ ದಿನಾಂಕ 28.08.2009 ರ ಪತ್ರವೊಂದು ನಮ್ಮ ಕಚೇರಿಗೆ ಬಂದಿದೆ. ನಾನು ನಮ್ಮ ಕಚೇರಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಸದರಿ ಪತ್ರಕ್ಕೆ ದಿನಾಂಕ 01.09.2009 ರಂದು ಉತ್ತರವನ್ನು ನೀಡಿದ್ದೇನೆ. ಸದರಿ ರಿಪ್ಲೆ ಲೆಟರ್ ನ್ನು ಈಗ ನೋಡಿದೆನು. ಸದರಿ ಲೆಟರನ್ನು ನಿಪಿ-19 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನೋಡಿದೆ. ಅದು ನನ್ನ ಸಹಿ. ಸಾಕ್ಷಿ ಸಹಿಯನ್ನು ನಿಪಿ19(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿಜೆಪಿ ವಕೀಲರಿಂದಃ**

3. ಯಾವುದೇ ವ್ಯಕ್ತಿ ಆದಾಯ ತೆರಿಗೆ ಕಚೇರಿಗೆ ಆದಾಯ ತೆರಿಗೆ ಪಾವತಿಸಿದರೆ{IT Returns) ಅವರಿ ಸ್ವೀಕೃತಿ ನೀಡುತ್ತೇವೆ. ಸದರಿ ಸ್ವೀಕೃತಿಯಿಂದ ತೆರಿಗೆದಾರ ಯಾವ ಆದಾಯ ತೆರಿಗೆ ಕಚೇರಿಗೆ ಆದಾಯ ತೆರಿಗೆ ಪಾವತಿಸಿದ್ದಾನೆ

ಎಂದು ಗೊತ್ತಾಗುತ್ತದೆ.

4. ಹಾಸನದ ಆದಾಯ ತೆರಿಗೆ ಕಚೇರಿಯಲ್ಲಿ ಆದಾಯ ತೆರಿಗೆ(ವಾರ್ಡ್-1)ರಲ್ಲಿ ಆರೋಪಿಯ ಹೆಂಡತಿ-ಜಯಲಕ್ಷ್ಮೀ ಐಟಿ ರಿಟರ್ನ್ಸ್(IT Returns) ಸಲ್ಲಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು) ***ಓ.ಹೇ.ಕೇ.ಸ.ಇದೆ.***

***ಪ್ರಧಾನ ಜಿಲ್ಲಾ*** *ಮತ್ತು ಸೆಷನ್ಸ್ ಹಾಗೂ ಸ್ಪೆಷಲ್*
***ನ್ಯಾಯಾಧೀಶರು, ಹಾಸನ.***